**<u>ಸಾಕ್ಷಿಯನ್ನು ದಿಃ 06.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಕೆ.ಟಿ.ಎಸ್ ವಕೀಲರ ಪರವಾಗಿ ಶ್ರೀ ಎ.ಎಸ್ ವಕೀಲರಿಂದಃ-</u>**

ಪಟೇಲ್ ಸಿದ್ದನಾಯಕ ಮೊದಲನೆ ಮಗನ ಹೆಂಡತಿ ಚಿಕ್ಕ ದೇವಮ್ಮ ನವರ ಹೆಸರಿಗೆ ಬಂದಿರುವ ಸ್ವತ್ತನ್ನು ತೋರಿಸಿ ಬ್ಯಾಂಕ್ ನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ನಾನೆ ಹಾಜರುಪಡಿಸಿರುವ ನಿಪಿ. 14 ರ ಆರ್.ಟಿ.ಸಿ ಯಲ್ಲಿ ನಮೂದು ಇದೆ ಎಂದರೆ ಸಾಕ್ಷಿ ಎಲ್ಲಾ ಸದಸ್ಯರ ಅನುಮತಿ ಮೇರೆಗೆ ತೆಗೆದುಕೊಂಡಿರಬಹುದು ಎನ್ನುತ್ತಾರೆ. ಅದೆ ರೀತಿ ಪಟೇಲ್ ಸಿದ್ದನಾಯಕನ ಮೊಮ್ಮಗ ಜವರನಾಯಕನ ಮಗ 15 ನೇ ವಾದಿ ಸಿದ್ದನಾಯಕ ಅವರ ಭಾಗಕ್ಕೆ ಬಂದತಂಹ ಆಸ್ತಿಯನ್ನು ತೋರಿಸಿ ಬ್ಯಾಂಕ್ ನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ ಸ್ವತ್ತಿನ ವಿಭಾಗ ಆಗಿರುವುದಿಲ್ಲ ಕುಟುಂಬದ ಅನುಮತಿ ಮೇರೆಗೆ ಸಾಲ ತೆಗೆದುಕೊಂಡಿರಬಹುದು ಎನ್ನುತ್ತಾರೆ. ಹಾಗೆ ಸಾಲ ಪಡೆದುಕೊಂಡ ಬಗ್ಗೆ ನಾನೆ ಹಾಜರು ಪಡಿಸಿದ ನಿಪಿ. 16 ಆರ್.ಟಿ.ಸಿಯಲ್ಲಿ ನಮೂದಾಗಿದೆ ಎಂದರ ಇರಬಹುದು ಎನ್ನುತ್ತಾರೆ.

ಅದೆ ರೀತಿ ಪಟೇಲ್ ಸಿದ್ದನಾಯಕ ಮೂರನೆ ಮಗ ಕರೀನಾಯಕನ ಹೆಂಡತಿ ಚಿಕ್ಕತಾಯಮ್ಮ ರವರು ಕೂಡ ತಮ್ಮ ಭಾಗಕ್ಕೆ ಬಂದ ಆಸ್ತಿಯನ್ನು ತೋರಿಸಿ ಬ್ಯಾಂಕ್ ನಲ್ಲಿ ಸಾಲ ಡಪೆರುತ್ತಾರೆ ಎಂದರೆ ಸಾಕ್ಷಿ ಸ್ವತ್ತಿನ ವಿಭಾಗ ಆಗಿರುವುದಿಲ್ಲ ಕುಟುಂಬದ ಅನುಮತಿ ಮೇರೆಗೆ ಸಾಲ ತೆಗೆದುಕೊಂಡಿರಬಹುದು ಎನ್ನುತ್ತಾರೆ. ಹಾಗೆ ಸಾಲ ಪಡೆದುಕೊಂಡ ಬಗ್ಗೆ ನಾನೆ ಹಾಜರು ಪಡಿಸಿದ ನಿಪಿ. 18 ಆರ್.ಟಿ.ಸಿಯಲ್ಲಿ ನಮೂದಾಗಿದೆ ಎಂದರೆ ಇರಬಹುದು ಎನ್ನುತ್ತಾರೆ. ಪಟೇಲ್ ಸಿದ್ದನಾಯಕ ಆಸ್ತಿಗೆ ಸಂಬಂಧಿಸಿದ ಹಂಚಿಕೊಂಡು ಎಂ.ಆರ್ ನಂ. 4/92-93 ರಂತೆ ಹಂಚಿಕೊಂಡು ಖಾತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಹಾಗೆ ಹಂಚಿಕೊಂಡು ಸ್ವಾಧೀನದಲ್ಲಿ ಇದ್ದರೂ 35 ವರ್ಷಗಳ ನಂತರ ಯಾವುದೆ ವಾಜ್ಯ ಕಾರಣ ಇಲ್ಲದಿದ್ದರೂ ದಾವೆ ಹಾಕಿಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 1 ರ ಮೇಲೆ ಪಟೇಲ್ ಸಿದ್ದನಾಯಕರು ಬ್ಯಾಂಕ್ ನಲ್ಲಿ ಸಾಲ ತೆಗೆದುಕೊಂಡಿದ್ದರು ಎಂದರೆ ಸರಿ. ಸದರಿ ಸ್ವತ್ತು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದು, ಅದಕ್ಕೂ ಪೂರ್ವದಲ್ಲಿ 1 ನೇ ಪ್ರತಿವಾದಿಯೆ ಸಾಲವನ್ನು ತೀರಿಸಿದ್ದರು ಎಂದರೆ ಸರಿಯಲ್ಲ. ಸದರಿ ರವರೆ ಸಾಲ ತೀರಿಸಿದ ಕಾರಣ ಐಟಂ ನಂ. 1 ರ ಸ್ವತ್ತನ್ನು ಅವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಎಂ.ಆರ್ 4/92-93 ರಲ್ಲಿ ನಮೂದಿಸಿದ ಸ್ವತ್ತನ್ನು ಹೊರತು ಪಡಿಸಿ ಸರ್ವೆ ನಂ.25 ರಲ್ಲಿ 6 ಎಕರೆ 15 ಗುಂಟೆ ಜಮೀನು 1 ನೇ ಪ್ರತಿವಾದಿಯ ಗಂಡನ ಅಣ್ಣಂದಿರು ಬೆಟ್ಟನಾಯಕ, ಜವರನಾಯಕ ಮತ್ತು ಕರೀನಾಯಕ ರವರ ಹೆಸರಿಗೆ ಹೋಗಿರುತ್ತದೆ ಎಂದರೆ ಸಾಕ್ಷಿ ಸರ್ಕಾರದಿಂದ ಗ್ರ್ಯಾಂಟ್ ಕೊಟ್ಟಿರುವುದು ಎಂದು ನುಡಿಯುತ್ತಾರೆ. ಸದರಿ ರವರ ವಾರಸುದಾರರ ಹೆಸರಿಗೆ ಪ್ರತ್ಯೇಕ ಆರ್.ಟಿ.ಸಿ ಕೂಡ ಬಂದಿದೆ ಎಂದರೆ ಇರಬಹುದು. ಈ ರೀತಿ ಪಟೇಲ್ ಸಿದ್ದನಾಯಕ ರವರ ಮಕ್ಕಳಿಗೆ ಅಸ್ತಿ ಸಮವಾಗಿ ಹಂಚಿಕೆ ಆಗಿದೆ ಎಂದರೆ ಸರಿಯಲ್ಲ.1 ರಿಂದ 4 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಈಗಾಗಲೆ ಭಾಗ ಆಗಿದ್ದ ಕಾರಣ ದಾವಾ ಸ್ವತ್ತುಗಳಲ್ಲಿ ಭಾಗ ಕೇಳಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 5 ಮತ್ತು 6 ನೇ ಪ್ರತಿವಾದಿಗಳ ಪರ ವಕೀಲರಿಂದಃ-**

ಶ್ರೀ ಎಂ.ಬಿ. ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.